ಕರ್ನಾಟಕ ಸರ್ಕಾರ

ಸಂಖ್ಯೆ:ಕರಾಮಹರಆ/ಮ.ರ.ವ್ಯ/7/2026–27

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಡಾ.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ:22.07.2026

ಸುತ್ತೋಲೆ

ವಿಷಯ: ವಿವಿಧ ಹಂತಗಳ ಮಕ್ಕಳ ಹಕ್ಕುಗಳ ಸಂರಕ್ಷಣಾ ವ್ಯವಸ್ಥೆಗಳನ್ನು ಹಾಗೂ ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿದ ಕಾನೂನುಗಳನ್ನು ಅನುಷ್ಠಾನಗೊಳಿಸಿ ಬಲಪಡಿಸುವ ಯೋಜನೆ ತಯಾರಿಸಿ ಕ್ರಿಯಾಶೀಲಗೊಳಿಸುವ ಕುರಿತು.

ಉಲ್ಲೇಖ: 1. ಮಕ್ಕಳು ಬಾಲಗರ್ಭಿಣಿಯರಾಗುವುದು ಹಾಗೂ ಬಾಲ್ಯವಿವಾಹ ತಡೆಗಟ್ಟಲು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡಾವಳಿಯಂತೆ ಸರ್ಕಾರದ ಆದೇಶ ಸಂಖ್ಯೆ:ಮಮಇ 115 ಮಮಅ 2024 ಬೆಂಗಳೂರು ದಿನಾಂಕ: 06–09–2024.

2. ಶಾಲೆ, ಕಾಲೇಜು, ವಸತಿ ನಿಲಯಗಳಲ್ಲಿ ಮಕ್ಕಳ ಹಕ್ಕುಗಳ ಅನುಷ್ಠಾನ, ಬಾಲ್ಯವಿವಾಹ ತಡೆ ಹಾಗೂ ಪೊಕ್ಸೋ ಕಾಯ್ದೆ ಬಗ್ಗೆ ಅರಿವು ನೀಡುವ ಕುರಿತು 7 ಇಲಾಖೆಗಳ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಜಂಟಿ ಸುತ್ತೋಲೆ ಸಂಖ್ಯೆ:ಮರನಿ/ಬಾ.ವಿ.ನಿ.ಕೋ/ಇತರೆ10/2025–26 ದಿನಾಂಕ:13–10–2025.

*****

ಮೇಲಿನ ಉಲ್ಲೇಖ, ಸರ್ಕಾರದ ಆಶಯ ಹಾಗೂ ಕರ್ನಾಟಕ ರಾಜ್ಯವನ್ನು ಬಾಲ್ಯವಿವಾಹ ಮುಕ್ತ ರಾಜ್ಯವನ್ನಾಗಿಸುವ ಮತ್ತು ಅಪ್ರಾಪ್ತ ಹೆಣ್ಣು ಮಕ್ಕಳು ಬಾಲ್ಯವಿವಾಹದ ಹಾಗೂ ವಿವಿಧ ಕಾರಣಗಳಿಂದ ಬಾಲಗರ್ಭಿಣಿಯಾಗುವುದನ್ನು ತಡೆಗಟ್ಟುವ ಅಭಿಯಾನವನ್ನು ಅನುಷ್ಠಾನಕ್ಕೆ ತರುವ ನಿಮ್ಮೆಲ್ಲರ ಶ್ರಮ ಹಾಗೂ ಪ್ರಯತ್ನ ಅಭಿನಂದನಾರ್ಹವಾದುದು. ಆದರೆ ಈ ಅಭಿಯಾನದ ಗುರಿಯನ್ನು ಆದಷ್ಟು ಬೇಗ ಸಾಧಿಸಬೇಕಾಗಿದೆ ಹಾಗೂ ಮಿಷನ್ ವಾತ್ಸಲ್ಯ ಯೋಜನೆ, ಪೋಷಣ್ 2.0, ಜಲ ಜೀವನ್ ಮಿಷನ್, ಸಮಗ್ರ ಶಿಕ್ಷಣ ಅಭಿಯಾನ, ರಾಷ್ಟ್ರೀಯ ವಿಪತ್ತು ನಿರ್ವಹಣೆ ಈ ಯೋಜನೆಗಳನ್ನೂ ಕೂಡ ವಿವಿಧ ಇಲಾಖೆಗಳ ಬಲವಾದ ಸಹಭಾಗಿತ್ವ ಮತ್ತು ಭಾಗವಹಿಸುವಿಕೆಯೊಂದಿಗೆ ಕಾರ್ಯತಂತ್ರಗಳನ್ನು ರೂಪಿಸಿ ತುರ್ತಾಗಿ ಅನುಷ್ಠಾನಗೊಳಿಸಬೇಕಾದ ಅಗತ್ಯವಿದೆ.

ರಾಜ್ಯದಲ್ಲಿ ಯುನಿಸೆಫ್(UNICEF) ಮಕ್ಕಳ ಹಕ್ಕುಗಳ ರಕ್ಷಣಾ ಯೋಜನೆ, ಕೊಪ್ಪಳ ಇವರ ಸಂಯೋಜನೆಯೊಂದಿಗೆ ಮಕ್ಕಳ ಹಕ್ಕುಗಳ ರಕ್ಷಣಾ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಎಲ್ಲಾ ಭಾಗೀದಾರ ಇಲಾಖೆಗಳ ಅಧಿಕಾರಿ/ಸಿಬ್ಬಂದಿಯವರಿಗೆ ತರಬೇತಿಯನ್ನು ನೀಡಲಾಗುವುದು.

ಮಕ್ಕಳ ಸಂರಕ್ಷಣಾ ವ್ಯವಸ್ಥೆಯನ್ನು ಮಕ್ಕಳ ರಕ್ಷಣೆ ಮತ್ತು ಮಕ್ಕಳ ಹಕ್ಕುಗಳ ವ್ಯವಸ್ಥೆಗಳನ್ನು ಬಲಪಡಿಸುವ ಉದ್ದೇಶದಿಂದ ಕಲ್ಯಾಣ ಕರ್ನಾಟಕ ಪ್ರದೇಶದ ಏಳು ಜಿಲ್ಲೆಗಳಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶದ ಅಭಿವೃದ್ಧಿ ಮಂಡಳಿಯ ಸಹಯೋಗ ಹಾಗೂ ರಾಜ್ಯದ ಇತರೆ ಎಲ್ಲಾ ಜಿಲ್ಲೆಗಳ ಜಿಲ್ಲಾಡಳಿತ, ತಾಲ್ಲೂಕು ಹಾಗೂ ತಳಹಂತದ ಮಕ್ಕಳ ಸಂರಕ್ಷಣಾ ಸಮಿತಿಗಳನ್ನು ಬಲಪಡಿಸುವ ಯೋಜನೆ ತಯಾರಿಸಲು, ತರಬೇತಿ ನೀಡಲು, ಕಾನೂನುಗಳ ಕಠಿಣ ಅನುಷ್ಠಾನಕ್ಕೆ ಎಲ್ಲಾ ಹಂತದಲ್ಲಿ ಬೆಂಬಲ ಹಾಗೂ ಸಹಕಾರ ನೀಡಲು ಕ್ರಮವಹಿಸಬೇಕಾಗಿದೆ. ಆದ್ದರಿಂದ ಮುಂದಿನ ದಿನಗಳಲ್ಲಿ ಕೊಪ್ಪಳ ಯುನಿಸೆಫ್ ಮಕ್ಕಳ ಹಕ್ಕುಗಳ ರಕ್ಷಣಾ ಯೋಜನೆಯ ಸಮಾಲೋಚಕರುಗಳಾದ ಡಾ. ಕೆ ರಾಘವೇಂದ್ರ ಭಟ್ (9845699735), ಶ್ರೀ ಹರೀಶ್ ಜೋಗಿ (9035129484), ಸಿಸ್ಟರ್ ಡುಲ್ಸಿನ್ ಕ್ರಾಸ್ತಾ (9449606258) ಹಾಗೂ ಯುನಿಸೆಫ್‌ನ ಪ್ರತಿನಿಧಿಗಳು ತಮ್ಮ ಜಿಲ್ಲೆಗಳಿಗೆ ಭೇಟಿ ನೀಡಿ ಅಗತ್ಯ ಸಹಕಾರ ನೀಡುವರು.

ಈ ಸಮಿತಿ ಸಭೆಗಳನ್ನು ನಡೆಸುವ ಸಂದರ್ಭದಲ್ಲಿ ಇವರುಗಳ ಸಹಕಾರ ಪಡೆಯುವುದು ಹಾಗೂ ಭೇಟಿ ನೀಡಿದಾಗ ಎಲ್ಲಾ ರೀತಿಯ ಸೂಕ್ತ ಬೆಂಬಲ, ಸಹಕಾರ, ಸ್ಪಂದನೆ ನೀಡುವುದು. ವಿವರಗಳನ್ನು ಅನುಬಂಧ-1 ಮತ್ತು ಅನುಬಂಧ-2ರಲ್ಲಿ ಲಗತ್ತಿಸಿದೆ.

ಸರ್ಕಾರದ ಕಾರ್ಯದರ್ಶಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ
ಅಧ್ಯಕ್ಷರು
ಮಿಷನ್ ವಾತ್ಸಲ್ಯ ಯೋಜನಾ (ಐ.ಸಿ.ಪಿ.ಎಸ್)
ಸೊಸೈಟಿ, ಬೆಂಗಳೂರು.

ಇವರಿಗೆ:

1. ರಾಜ್ಯದ ಎಲ್ಲಾ 31 ಜಿಲ್ಲೆಗಳ ಮಾನ್ಯ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತಿ ಮುಖ್ಯಕಾರ್ಯನಿರ್ವಣಾಧಿಕಾರಿಗಳು ಮತ್ತು ಪೊಲೀಸ್ ವರಿಷ್ಟಾಧಿಕಾರಿಗಳಿಗೆ
2. ರಾಜ್ಯದ ಎಲ್ಲಾ 31 ಜಿಲ್ಲೆಯ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಿಗೆ
3. ಕಾರ್ಯದರ್ಶಿಗಳು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಕಲಬುರಗಿ.

ಅನುಬಂಧ–1

ಪ್ರಮುಖವಾಗಿ ಜಿಲ್ಲಾ, ತಾಲೂಕು ಹಾಗೂ ನಗರ ಮತ್ತು ಗ್ರಾಮ ಪಂಚಾಯತಿ ಮಟ್ಟದ ವಿವಿಧ ಸಮಿತಿಗಳಾದ,

1. ಜಿಲ್ಲಾ ಮಕ್ಕಳ ರಕ್ಷಣಾ ಸಮಿತಿ (DCPC)
2. ತಾಲ್ಲೂಕು ಮಟ್ಟದ ಮಕ್ಕಳ ರಕ್ಷಣಾ ಸಮಿತಿ (TCPC)
3. ನಗರ ಮಹಿಳಾ ಮತ್ತು ಮಕ್ಕಳ ರಕ್ಷಣಾ ಸಮಿತಿ (UWCPC),
4. ಮಹಿಳಾ ಮತ್ತು ಮಕ್ಕಳ ರಕ್ಷಣಾ ಸಮಿತಿ (WCPC),
5. ಗ್ರಾಮ ಮಟ್ಟದ ಮಕ್ಕಳ ರಕ್ಷಣಾ ಸಮಿತಿ (VCPC),
6. ಬಾಲ ವಿಕಾಸ ಸಮಿತಿ (BVS),
7. ಗ್ರಾಮ ಮಟ್ಟದ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಟಿಕ ಆಹಾರ ಸಮಿತಿ (VHSNC),
8. ಮಕ್ಕಳ ರಕ್ಷಣಾ ಸಮಿತಿ (CPC)

ಅನುಬಂಧ–2

ಈ ಯೋಜನೆಯಲ್ಲಿ ಈ ಕೆಳಗಿನ ಕಾರ್ಯತಂತ್ರಗಳನ್ನು ಅಳವಡಿಸಲು ಉದ್ದೇಶಿಸಲಾಗಿದೆ.

1. ವಿವಿಧ ಹಂತದ ಮಕ್ಕಳ ಹಕ್ಕುಗಳ ಸಂರಕ್ಷಣೆಯ ವ್ಯವಸ್ಥೆಗಳನ್ನು ಬಲಪಡಿಸುವುದು.
2. ವಿವಿಧ ವಿಭಾಗದ ಮಕ್ಕಳ ಅಂಕಿ ಸಂಖ್ಯೆಗಳ ದತ್ತಾಂಶವನ್ನು ರಚಿಸುವುದು.
3. ವಿವಿಧ ಇಲಾಖೆಗಳ, ವಿವಿಧ ಹಂತದ ಅಧಿಕಾರಿಗಳನ್ನು ತರಬೇತುಗೊಳಿಸುವುದು.
4. ಕುಟುಂಬ ಆಧಾರಿತ ಮಕ್ಕಳ ಪಾಲನೆ ಮತ್ತು ಪೋಷಣೆಯನ್ನು ಪ್ರೋತ್ಸಹಿಸುವುದು.
5. ವಿಪತ್ತು ನಿರ್ವಹಣೆ ಕಾರ್ಯತಂತ್ರಗಳನ್ನು ಸಾರ್ವತ್ರೀಕರಣಗೊಳಿಸುವುದು.
6. ನೀರು ಮತ್ತು ನೈರ್ಮಲ್ಯ ಕ್ಷೇತ್ರದ ಕಾರ್ಯತಂತ್ರಗಳು
7. ಮಕ್ಕಳ ಹಕ್ಕುಗಳ ಹಾಗೂ ಮಕ್ಕಳಿಗೆ ಸಂಬಂಧಿಸಿದ ಕಾನೂನುಗಳ ಕಠಿಣ ಅನುಷ್ಠಾನ.
8. ಕರ್ನಾಟಕದ ರಾಜ್ಯದ ಆಶಯದಂತೆ ರಾಜ್ಯದ ಗ್ರಾಮ ಪಂಚಾಯತಿಗಳನ್ನು ಬಾಲ್ಯವಿವಾಹ ಮುಕ್ತ ಪಂಚಾಯಾತಿಗಳನ್ನಾಗಿ ಮಾಡುವುದು.
9. ವಿವಿಧ ಇಲಾಖೆಗಳ ಹೊಣೆಗಾರಿಕೆಯನ್ನು ಕ್ರಿಯಾಶೀಲಗೊಳಿಸಿ ವಿವಿಧ ಹಂತದಲ್ಲಿ ಕಾಲ ಕಾಲಕ್ಕೆ ಸೂಕ್ತ ಪ್ರಗತಿ ನಿಗಾವಣೆ, ಪರಿಶೀಲನೆ, ಮೇಲ್ವಿಚಾರಣೆ, ಉಸ್ತುವಾರಿಯನ್ನು ಸಬಲೀಕರಣಗೊಳಿಸಿ ಇಲಾಖೆಗಳ ಸಹಭಾಗಿತ್ವ ಮತ್ತು ಇಲಾಖೆಗಳ ಭಾಗವಹಿಸುವಿಕೆಯನ್ನು ಬಲಪಡಿಸುವುದು.
10. ಬಾಲ್ಯವಿವಾಹ, ಮಕ್ಕಳು ಹಾಗೂ ಕಿಶೋರ ಕಾರ್ಮಿಕ ಪದ್ಧತಿ, ಮಕ್ಕಳ ಅನೈತಿಕ ಸಾಗಾಣಿಕೆ ಮತ್ತು ಮಾರಾಟ, ಭಿಕ್ಷಾಟನೆ, ಮಕ್ಕಳು ಕಾಣೆಯಾಗುವುದು, ಬೀದಿ ಮಕ್ಕಳು, ಮಾದಕ ವ್ಯಸನ, ಆನ್ ಲೈನ್ ವಂಚನೆ ಹಾಗೂ ಪಾಕ್ಸೋ ಪ್ರಕರಣಗಳಲ್ಲಿ ಆರೋಪಿಗಳಿಗೆ ಶಿಕ್ಷೆಯ ಪ್ರಮಾಣ ಹೆಚ್ಚಿಸುವುದು.
11. ಶಾಲೆ, ವಸತಿ ನಿಲಯ, ಕಾಲೇಜ್, ವಿವಿಧ ಇಲಾಖೆಗಳ ವಿವಿಧ ತರಬೇತಿ ಕೇಂದ್ರ ಮತ್ತು ಯಾವುದೇ ಕ್ಷೇತ್ರ ಹಾಗೂ ಕುಟುಂಬಗಳಲ್ಲಿ 18 ವರ್ಷದೊಳಗಿನ ಮಕ್ಕಳ ಮೇಲಿನ ಹಿಂಸೆ, ದೌರ್ಜನ್ಯ, ಲೈಂಗಿಕ ಹಲ್ಲೆ/ ಕಿರುಕುಳ ಹಾಗೂ ಶೋಷಣೆಯನ್ನು ತೆಡಗಟ್ಟಿ ಮಕ್ಕಳ ಸ್ನೇಹಿ ವಾತಾವರಣ ಸೃಷ್ಟಿಸುವುದು.
12. ಎಲ್ಲಾ ಸರಕಾರಿ, ಅರೆ ಸರಕಾರಿ ಕಛೇರಿ, ಕಟ್ಟಡಗಳಲ್ಲಿ ಕಡ್ಡಾಯವಾಗಿ 1098 ಮಕ್ಕಳ ಸಹಾಯವಾಣಿಯ ಶಾಶ್ವತ ಫಲಕಗಳನ್ನು ಅಳವಡಿಸಿರುವ ಬಗ್ಗೆ ಖಾತ್ರಿಪಡಿಸುವುದು.